## ರೈ ಎಸ್ಟೇಟ್ಸ್ ಎಜ್ಯುಕೇಶನಲ್ - ಚಾರಿಟೇಬಲ್ ಟ್ರಸ್ಟ್ ಕೊಡುಗೆ

# ನಿವೇಶನ ರಹಿತರಿಗೆ ನಿವೇಶನ ಹಂಚುವ ಯೋಜನೆ



**ಉಪ್ಪಿನಂಗಡಿ:** ರೈ ಎಸ್ಟೇಟ್ಸ್ ಎಜ್ಯುಕೇಶನಲ್ - ಚಾರಿಟೇಬಲ್ ಟ್ರಸ್ಟ್‌ನಿಂದ ಮುಂದಿನ ದಿನಗಳಲ್ಲಿ ನಿವೇಶನ ರಹಿತರಿಗೆ ನಿವೇಶನ ನೀಡುವ ಯೋಜನೆ ಹಾಕಿಕೊಳ್ಳಲಾಗಿದೆ ಎಂದು ಟ್ರಸ್ಟ್‌ನ ಪ್ರವರ್ತಕ, ದ.ಕ. ಜಿಲ್ಲಾ ಬಿಜೆಪಿ ಕಾರ್ಯಕಾರಿಣಿ ಸದಸ್ಯ ಅಶೋಕ್ ಕುಮಾರ್ ರೈ ಕೋಡಿಂಬಾಡಿ ತಿಳಿಸಿದರು.

ಅವರು ಪೆರ್ನೆಯ ಮೊಮ್ಮಾರಿಯ ಬಡ ಕುಟುಂಬವೊಂದಕ್ಕೆ ಟ್ರಸ್ಟ್‌ನ ಖರ್ಚಿನಲ್ಲಿ ಭೂ ಪರಿವರ್ತನೆ ಮಾಡಿ ಅದರ ದಾಖಲೆ ಪತ್ರ ಹಸ್ತಾಂತರಿಸಿ ಮಾತನಾಡಿದರು. ಸಮಾಜದಲ್ಲಿ ಅದೆಷ್ಟೋ ಮಂದಿ ಬಡ ನಿವೇಶನ ರಹಿತರು ಇದ್ದಾರೆ. ಅವರಿಗಾಗಿ ಟ್ರಸ್ಟ್ ವತಿಯಿಂದ ಐದು ಕಡೆಗಳಲ್ಲಿ ತಲಾ 5ರಿಂದ 10 ಎಕರೆಗಳಷ್ಟು ಜಾಗ ಖರೀದಿಸಿ, ಅದನ್ನು ನಾಲ್ಕು ಸೆಂಟ್ಸ್‌ನಂತೆ ನಿವೇಶನ ರಹಿತರಿಗೆ ಹಂಚಿ, ಅವರ ಹೆಸರಿನಲ್ಲಿ ಹಕ್ಕು ಪತ್ರ ಮಾಡಿಕೊಡಲಾಗುವುದು. ಸರಕಾರದ ವಸತಿ ಯೋಜನೆಯಡಿಯಲ್ಲಿ ನಿವೇಶನ ತೆಗಿಸಿಕೊಟ್ಟು, ಅದಕ್ಕೆ ಟ್ರಸ್ಟ್‌ನ ಹಣವನ್ನು ಸೇರಿಸಿ, ಅವರಿಗೆ ಉತ್ತಮವಾದ ಮನೆ ನಿರ್ಮಿಸಿಕೊಡಲಾಗುವುದು. ಪುತ್ತೂರು ವಿಧಾನ ಸಭಾ ಕ್ಷೇತ್ರದಲ್ಲಿ 1ಸಾವಿರ ಬಡ ನಿವೇಶನ ರಹಿತರಿಗೆ ಈ ಸೌಲಭ್ಯ ನೀಡಲು ಯೋಜನೆ ಹಾಕಿಕೊಳ್ಳಲಾಗಿದ್ದು, ಇಂತಹ ಲೇ ಔಟ್‌ಗಳಿಗೆ ಶುದ್ಧವಾದ ಕುಡಿಯುವ ನೀರಿನ ಸೌಲಭ್ಯ, ರಸ್ತೆ, ಶಾಲಾ ವ್ಯವಸ್ಥೆಯನ್ನು ಟ್ರಸ್ಟ್ ವತಿಯಿಂದಲೇ ಮಾಡಿಕೊಡಲಾಗುವುದು ಎಂದರು.

ಜಾಗದ ಹಕ್ಕು ಪತ್ರ ಫಲಾನುಭವಿ ಸುನಂದ, ಸ್ವಂತ ನಿವೇಶನವೆನ್ನುವುದು ಬಡವರಾದ ನಮಗೆ ಕನಸಾಗಿತ್ತು. ಆದರೆ ಗೋಪಾಲ ಶೆಟ್ಟಿ ಹಾಗೂ ಅಶೋಕ್ ಕುಮಾರ್ ರೈ ಅವರ ಬಡವರ ಸಂಕಷ್ಟಕ್ಕೆ ತುಡಿಯುವ ಮನಸ್ಸಿಂದ ಅದು ಸಾಧ್ಯವಾಗಿದೆ. ಮನೆ ಬಿದ್ದು ಹೋದ ಸಂದರ್ಭದಲ್ಲಿ ಸಣ್ಣ ಮಕ್ಕಳನ್ನು ಕಟ್ಟಿಕೊಂಡು ಎಲ್ಲಿಗೆ ಹೋಗಲಿ? ನಮ್ಮ ಬದುಕಿನ್ನು ಮುಗಿದೇ ಹೋಯಿತು ಎಂಬ ಯೋಚನೆಯಲ್ಲಿದ್ದ ಸಂದರ್ಭದಲ್ಲಿ ನಮ್ಮ ಪಾಲಿಗೆ ಬೆಳಕಾಗಿ ಬಂದವರು ಈ ಇಬ್ಬರು. ನಮ್ಮ ಕುಟುಂಬಕ್ಕೆ ಪುನಃ ಬದುಕು ಕೊಟ್ಟ ಇವರು ನಮಗೆ ದೇವರ ಸಮಾನ ಎಂದರು.

**ಸಮಾಜದಲ್ಲಿ ಅದೆಷ್ಟೋ ಮಂದಿ ಬಡ ನಿವೇಶನ ರಹಿತರು ಇದ್ದಾರೆ. ಅವರಿಗಾಗಿ ಟ್ರಸ್ಟ್ ವತಿಯಿಂದ ಐದು ಕಡೆಗಳಲ್ಲಿ ತಲಾ 5ರಿಂದ 10 ಎಕರೆಗಳಷ್ಟು ಜಾಗ ಖರೀದಿಸಿ, ಅದನ್ನು ನಾಲ್ಕು ಸೆಂಟ್ಸ್‌ನಂತೆ ನಿವೇಶನ ರಹಿತರಿಗೆ ಹಂಚಿ, ಅವರ ಹೆಸರಿನಲ್ಲಿ ಹಕ್ಕು ಪತ್ರ ಮಾಡಿಕೊಡಲಾಗುವುದು. ಸರಕಾರದ ವಸತಿ ಯೋಜನೆಯಡಿಯಲ್ಲಿ ನಿವೇಶನ ತೆಗಿಸಿಕೊಟ್ಟು, ಅದಕ್ಕೆ ಟ್ರಸ್ಟ್‌ನ ಹಣವನ್ನು ಸೇರಿಸಿ, ಅವರಿಗೆ ಉತ್ತಮವಾದ ಮನೆ ನಿರ್ಮಿಸಿಕೊಡಲಾಗುವುದು. ಪುತ್ತೂರು ವಿಧಾನ ಸಭಾ ಕ್ಷೇತ್ರದಲ್ಲಿ 1ಸಾವಿರ ಬಡ ನಿವೇಶನ ರಹಿತರಿಗೆ ಈ ಸೌಲಭ್ಯ ನೀಡಲು ಯೋಜನೆ ಹಾಕಿಕೊಳ್ಳಲಾಗಿದೆ,**

ಈ ಸಂದರ್ಭ ಟ್ರಸ್ಟ್ ವತಿಯಿಂದ ಸ್ಥಳದಾನಿ ಗೋಪಾಲ ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು. ಅಲ್ಲದೇ, ಬಡವರ ಉನ್ನತಿಗಾಗಿ ಶ್ರಮಿಸುತ್ತಿರುವ ಅಶೋಕ್ ಕುಮಾರ್ ರೈ ಕೋಡಿಂಬಾಡಿ, ಪುತ್ತೂರು ಜನಸೇವಾ ಕೇಂದ್ರದ ಆದರ್ಶ ಕಜೆಕ್ಕಾರ್, ಸಿಬಂದಿ ಲಿಂಗಪ್ಪ ಹಾಗೂ ಗ್ರಾಮ ಪಂಚಾಯತ್ ಸದಸ್ಯ ನವೀನ್ ಪದಬರಿ ಅವರನ್ನು ಊರವರ ಪರವಾಗಿ ಸನ್ಮಾನಿಸಲಾಯಿತು.

ರೈ ಎಸ್ಟೇಟ್ಸ್ ಎಜ್ಯುಕೇಶನಲ್ - ಚಾರಿಟೇಬಲ್ ಟ್ರಸ್ಟ್‌ನ ವತಿಯಿಂದ ಮಲ್ಲಡ್ಕ ಶಾಲೆಗೆ ಶಿಕ್ಷಕರ ಗೌರವಧನದ ಚೆಕ್‌ನ್ನು ಹಸ್ತಾಂತರಿಸಲಾಯಿತು. ಪೆರ್ನೆ-ಬಿಳಿಯೂರು ಬಿಜೆಪಿ ಗ್ರಾಮ ಸಮಿತಿ ಅಧ್ಯಕ್ಷ ಶ್ರೀಧರ ಗೌಡ ಕಾರ್ಯಕ್ರಮ ಉದ್ಘಾಟಿಸಿದರು.

ವೇದಿಕೆಯಲ್ಲಿ ಬಿಜೆಪಿ ಗ್ರಾಮ ಸಮಿತಿ ಪ್ರಧಾನ ಕಾರ್ಯದರ್ಶಿ ಶರೂನ್ ನೊರೋನ್ಹಾ, ಬಿಜೆಪಿ ಮುಖಂಡರಾದ ಪುಷ್ಪರಾಜ ಶೆಟ್ಟಿ, ಸುರೇಂದ್ರ ನಾಯಕ್ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಪೆರ್ನೆ ಗ್ರಾಮ ಪಂಚಾಯತ್ ಸದಸ್ಯರಾದ ಯಶೋಧಾ, ಲಲಿತಾ, ಸುಮತಿ, ಹರಿಣಾಕ್ಷಿ, ಶಿವಪ್ಪ ನಾಯ್ಕ, ವೇಣುಗೋಪಾಲ ಶೆಟ್ಟಿ, ಪ್ರಮುಖರಾದ ನರಸಿಂಹ ನಾಯಕ್, ಗಿರೀಶ್ ಪೆರ್ಗಡೆ, ಭಾಸ್ಕರ ಗೌಡ, ಕುಸುಮಾಧರ ಗೌಡ, ಸುರೇಶ್ ಪೂಜಾರಿ, ಕೇಶವ ಬೆದ್ರ, ಗ್ರಾಮ ಪಂಚಾಯತ್ ಮಾಜಿ ಸದಸ್ಯ ವೆಂಕಪ್ಪ ನಾಯ್ಕ, ವಸಂತ ಶೆಟ್ಟಿ, ಶರತ್, ಐತಪ್ಪ ಭಂಡಾರಿ ಮತ್ತಿತರರು ಉಪಸ್ಥಿತರಿದ್ದರು.

ಬಿಜೆಪಿ ಮುಖಂಡ ರಮೇಶ್ ತೋಟ ಸ್ವಾಗತಿಸಿ, ಪೆರ್ನೆ ಗ್ರಾಮ ಪಂಚಾಯತ್ ಸದಸ್ಯ ನವೀನ್ ಪದಬರಿ ವಂದಿಸಿದರು. ಪಾಣಾಜೆ ಸಿಎ ಬ್ಯಾಂಕ್ ನಿರ್ದೇಶಕ ರವೀಂದ್ರ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ಹೊಸದಿಗಂತ - 5/12/2018